# ಸ್ವಾಮಿ ಬೋಧಾತ್ಮಾನಂದ (೧೯೦೦-೧೯೭೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ-೨**

ಪ್ರತಿವರ್ಷವೂ ಒಬ್ಬ ಬ್ರಹ್ಮಚಾರಿಯಂತೆ ಭವ ಮಹಾರಾಜರ ಸೇವೆಗೆ ನಿಯೋಜಿಸಲಾಗುತ್ತಿತ್ತು. ಅವರ ಕೋಣೆಯನ್ನು ಸ್ವಚ್ಛಗೊಳಿಸುವುದು, ಬಟ್ಟೆ ಒಗೆಯುವುದು, ಬೆಳಗಿನ ಉಪಾಹಾರ, ಸಂಜೆಯ ತಿಂಡಿಯ ವ್ಯವಸ್ಥೆ ಇವು ಅವನ ಕೆಲಸ. 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ' ಎಂಬುದನ್ನು ತಿಳಿದಿದ್ದ ನಾನು, ದ್ವಿತೀಯ ವರ್ಷದಲ್ಲಿದ್ದಾಗ ''ಮಹಾರಾಜ್, ನನಗೆ ಒಂದು ವರ್ಷ ನಿಮ್ಮ ಸೇವೆಯನ್ನು ಮಾಡಲು ಅವಕಾಶ ಕೊಡಿ,'' ಎಂದು ವಿನಂತಿಸಿಕೊಂಡೆ. ಅವರು, ''ಇಲ್ಲ ನೀನು ನನ್ನ ವೈಯಕ್ತಿಕ ಸೇವೆ ಮಾಡುವುದು ಬೇಕಾಗಿಲ್ಲ. ನೀನು ನಿನ್ನ ಕೋಣೆಯಲ್ಲೆ ಕುಳಿತು ಶಾಸ್ತ್ರಾಧ್ಯಯನ ಹಾಗೂ ಅವುಗಳ ಮನನವನ್ನು ಮಾಡು, ಅದರಿಂದ ನನ್ನ ಸೇವೆಯನ್ನೆ ಮಾಡಿದಂತಾಗುತ್ತದೆ'' ಎಂದರು.

೧೯೬೬ರಲ್ಲಿ ಬ್ರಹ್ಮಚರ್ಯ ದೀಕ್ಷೆಯೂ ೧೯೬೯ರಲ್ಲಿ ಸಂನ್ಯಾಸ ದೀಕ್ಷೆಯನ್ನು ಪಡೆಯುವಾಗ ಭವ ಮಹಾರಾಜರು ನಮಗೆ ಆಚಾರ್ಯರಾಗಿದ್ದರು. ಅವರು ಬ್ರಹ್ಮಚರ್ಯ ಹಾಗೂ ಸಂನ್ಯಾಸ ಮಂತ್ರಗಳನ್ನು ಸ್ಪಷ್ಟವಾಗಿ ವಿವರಿಸುತ್ತಿದ್ದರು. ನಂತರ ಹೋಮದ ಸಮಯದಲ್ಲೂ ಮಂತ್ರಗಳನ್ನು ಆವೃತ್ತಿ ಮಾಡಿಸುತ್ತಿದ್ದರು. ಆಗ ಅವರ ಮುಖಮಂಡಲವು ಭಾವಪರವಶವಾಗಿರುತ್ತಿತ್ತು.

೧೯೬೫ರ ಘಟಿಕೋತ್ಸವದಲ್ಲಿ ಭಾಗವಹಿಸಲು ಪ್ರಭು ಮಹಾರಾಜ್ ಹಾಗೂ ಸ್ವಾಮಿ ಯತೀಶ್ವರಾನಂದಜಿಯವರನ್ನು ಆಮಂತ್ರಿಸಲು ಭವ ಮಹಾರಾಜರು ನನ್ನನ್ನು ಕಳುಹಿಸಿದರು. ಅವರು ಬಂದು ಸಾಧುಜೀವನದ ಬಗ್ಗೆ ಸುಂದರ ಉಪದೇಶಗಳನ್ನು ನೀಡಿದ್ದರು. ೧೯೬೬ರ ಘಟಿಕೋತ್ಸವದಲ್ಲಿ ಭವ ಮಹಾರಾಜರು ತಮ್ಮ ಭಾಷಣದಲ್ಲಿ ಹೇಳಿದ್ದರು: ''ವಿದ್ಯೆ ನಾಲ್ಕು ಕಡೆಯಿಂದ ಬರುತ್ತದೆ. ಆಚಾರ್ಯರಿಂದ ಕಾಲು ಭಾಗ, ವಿದ್ಯಾರ್ಥಿಯಿಂದ ಕಾಲು ಭಾಗ, ಸಹಪಾಠಿಗಳಿಂದ ಕಾಲುಭಾಗ ಹಾಗೂ ಕಾಲಾಂತರದಲ್ಲಿ ಕಾಲುಭಾಗ. ಆದ್ದರಿಂದ ನನ್ನಿಂದ ಕಾಲುಭಾಗಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಬೇಡಿ.''

ಆ ಕಾಲದಲ್ಲಿ ಟ್ರೇನಿಂಗ್ ಸೆಂಟರಿನ ಬ್ರಹ್ಮಚಾರಿಗಳಿಗೆ ಸಾಯಂಕಾಲ ಚಹಾದೊಂದಿಗೆ ತಿನ್ನಲು ಬೇರೇನೂ ಇರುತ್ತಿರಲಿಲ್ಲ. ಸಂಜೆ ಬಹಳ ಹಸಿವೆಯಾಗುತ್ತಿತ್ತು, ಆದ್ದರಿಂದ ನಾನು ಬರಿಯ ನೀರು ಕುಡಿಯುತ್ತಿದ್ದೆ. ೧೯೬೬ರ ಮಾರ್ಚ್‌ನಲ್ಲಿ ನನಗೆ ವಾಂತಿ ಶುರುವಾಯಿತು. ಎಲ್ಲರೂ ನನಗೆ ಅಲ್ಸರ್ ಆಗಿದೆಯೆಂದು ಭಾವಿಸಿದರು. ಒಂದು ದಿನ ಭವ ಮಹಾರಾಜರು



ಕೆಲವು ತೆಳುವಾದ ಆರಾರೂಟ್ ಬಿಸ್ಕತ್ತುಗಳೊಂದಿಗೆ ನನ್ನನ್ನು ನೋಡಲು ಬಂದರು. ನಾನು ಏನಾದರೂ ತಿನ್ನಬೇಕೆಂಬುದೇ ಅವರ ಉದ್ದೇಶವಾಗಿತ್ತು. ಇದನ್ನೆಂದೂ ನಾನು ಮರೆಯಲಾರೆ. ನಂತರ ನಾನೊಂದು ದಿನ ನನ್ನ ಟ್ರೇನಿಂಗ್ ಸೆಂಟರಿನ ಅನುಭವಗಳನ್ನು ಭಕ್ತರಿಗೆ ಹೇಳಿದೆ. ಆಗಿನ ಖಾದ್ಯ ವಸ್ತುಗಳ ಅಭಾವದ ಬಗ್ಗೆ ಕೇಳಿದ ಒಬ್ಬ ಅಮೆರಿಕನ್ ಮಹಿಳೆಯು ೧೨,೦೦೦ ಡಾಲರ್‌ಗಳನ್ನು ದಾನ ಮಾಡಿದರು. ನಾನು ಅದನ್ನು ಟ್ರೇನಿಂಗ್ ಸೆಂಟರ್‌ನ ಬ್ರಹ್ಮಚಾರಿಗಳ ಸಾಯಂಕಾಲದ ತಿಂಡಿಗೋಸ್ಕರ ಎಂದು ಪ್ರಭು ಮಹಾರಾಜರಿಗೆ ಕಳುಹಿಸಿದೆ. ''ಅದರ ಬಗ್ಗೆ ನೀನೇನೂ ಯೋಚಿಸಬೇಡ. ಈಗ ಬ್ರಹ್ಮಚಾರಿಗಳಿಗಾಗಿ ಸಾಯಂ

ಕಾಲ ಕಡಲೆಪುರಿ, ಬಿಸ್ಕತ್ತು ಮುಂತಾದವುಗಳ ವ್ಯವಸ್ಥೆಯನ್ನು ಮಾಡಲಾಗಿದೆ'' ಎಂದು ಅವರು ಪತ್ರವನ್ನು ಬರೆದರು.

೧೯೬೮ರ ದುರ್ಗಾಪೂಜೆಯ ರಜೆಯಲ್ಲಿ ಭವ ಮಹಾರಾಜರು ೧೦-೧೫ ದಿನಗಳ ಮಟ್ಟಿಗೆ ವಿಶ್ರಾಂತಿ ಪಡೆಯಲೆಂದು ಪುರುಲಿಯಾಗೆ ಹೋದರು. ನಾನು ಸಹ ಒಂದು ವಾರಕ್ಕೆಂದು ಅದ್ವೈತ ಆಶ್ರಮದಿಂದ ಅಲ್ಲಿಗೆ ಹೋಗಿದ್ದೆ. ಮಹಾರಾಜರ ಜೊತೆಗೆ ನಾನು ತಿರುಗಾಡುತ್ತಿದ್ದೆ. ರಾತ್ರಿ ಊಟದ ಬಳಿಕ ನಾನಾ ಬಗೆಯ ಮಾತುಕತೆಗಳು ನಡೆಯುತ್ತಿದ್ದವು. ಒಂದು ದಿನ ಅವರು ತಾವು ಪುರಿಯಲ್ಲಿದ್ದಾಗ ಕುಮುದ ಬಂಧು ಸೇನ್ ಅವರಿಂದ ಕೇಳಿದ್ದ, ಗಿರೀಶಚಂದ್ರ ಘೋಷನ ವಿಷಯವನ್ನು ಹೇಳಿದರು: ಗಿರೀಶನು ಮದ್ಯಪಾನ ಮಾಡಿ ತನ್ನ ಸ್ನೇಹಿತರೊಂದಿಗೆ ನಡುರಾತ್ರಿಯಲ್ಲಿ ದಕ್ಷಿಣೇಶ್ವರಕ್ಕೆ ಹೋದಾಗ ಠಾಕೂರರು ಬಾಗಿಲು ತೆರೆದು ಅವನೊಂದಿಗೆ 'ಹರಿ ಬೋಲ್, ಹರಿ ಬೋಲ್' ಎನ್ನುತ್ತ ನರ್ತಿಸಿದರು. ಮತ್ತೊಮ್ಮೆ ಮದ್ಯಪಾನ ಮಾಡಿ ಗಿರೀಶನು ವೇಶ್ಯೆಯೊಬ್ಬಳ ಮನೆಗೆ ಹೋದಾಗ ಅವಳಿಂದ ಅತ್ಯಂತ ಅವಮಾನಿತನಾಗಿ ತನ್ನ ಮನೆಗೆ ಹಿಂದಿರುಗಿದ. ಮಾರನೆಯ ದಿನ ಅವನು ದಕ್ಷಿಣೇಶ್ವರಕ್ಕೆ ಹೋಗಿ ನಡೆದುದನ್ನೆಲ್ಲ ಠಾಕೂರರಿಗೆ ಹೇಳಿದಾಗ ಅವರು, ''ಇನ್ನು ಮುಂದೆ ಹೀಗೆಂದೂ ಆಗದು, ಇನ್ನು ಮುಂದೆ ಹೀಗೆಂದೂ ಆಗದು'' ಎಂದು ಭರವಸೆ ನೀಡಿದರು. ಗಿರೀಶನು ಶ್ರೀರಾಮಕೃಷ್ಣರಿಗೆ 'ವಕಾಲತ್ತು' ನೀಡಿದ್ದರಿಂದ ಅವರು ಅವನ ಭಾರವನ್ನು ಸಂಪೂರ್ಣವಾಗಿ ಹೊತ್ತಿದ್ದರು.

ವಿಜಯದಶಮಿಯಂದು ಸಂಜೆ ಸ್ವಾಮಿ ಚಂದ್ರಾನಂದಜಿ ಹಾಗೂ ನಾವು ದುರ್ಗಾಪೂಜೆಯ ಬಗ್ಗೆ ಮಾತನಾಡಬೇಕೆಂದು ಭವ ಮಹಾರಾಜರನ್ನು ಕೇಳಿಕೊಂಡೆವು. ಅವರು ಸುಮಾರು ಒಂದು ಗಂಟೆಯ ಅವಧಿ ಅದರ ಮಹಾತ್ಮೆಯ ಬಗ್ಗೆ ಮಾತನಾಡಿದರು. ನಾನು ನನ್ನ ಡೈರಿಯಲ್ಲಿ ಅದರ ಕೆಲವು ಅಂಶಗಳನ್ನು ಬರೆದುಕೊಂಡಿದ್ದೆ. ಭವ ಮಹಾರಾಜರು ಬರೆದಿದ್ದ 'ಶ್ರೀ ಶ್ರೀ ದುರ್ಗಾಪೂಜಾ' ಎಂಬ ಲೇಖನದಿಂದ ಆರಿಸಿದ ಅಂಶಗಳು ಇಲ್ಲಿವೆ:

ಇಲ್ಲಿ ನಾವು 'ದುರ್ಗಾಪೂಜೆ'ಯಲ್ಲಿ ಪೂಜಿಸುವ ಪ್ರತಿಮೆಯ ಸಂಬಂಧವಾಗಿ ಚರ್ಚಿಸೋಣ. ಕೆಲವು ಪಂಡಿತರು ಹೀಗೆ ಅಭಿಪ್ರಾಯಪಡುತ್ತಾರೆ - ದಕ್ಷನ ಮಗಳಾದ ಸತಿಯು ನಂತರ ಶಿವಗೇಹಿನೀ ದುರ್ಗೆಯಾಗುತ್ತಾಳೆ. ಇದು ರೂಪಕ ಮಾತ್ರ. ದಕ್ಷರಾಜನು ಬಹಳ ಯಜ್ಞಪ್ರಿಯನಾಗಿದ್ದನು. ಯಜ್ಞವೇದಿಕೆಯು ಅವನ ಮಗಳ ಸ್ವರೂಪವನ್ನು ತಾಳಿದೆ. ಕಾಲಕ್ರಮದಲ್ಲಿ, ವೇದಿಸ್ಥವಾದ ಅಗ್ನಿಯು ಸತಿಯ ಪತಿ ಶಿವನ ರೂಪ ತಾಳುತ್ತದೆ, ಹಾಗೂ ವೇದಿಕೆಯ ದಶದಿಕ್ಕುಗಳನ್ನು ದುರ್ಗೆಯ ಹತ್ತು ಕೈಗಳಾಗಿ ಕಲ್ಪಿಸಿಕೊಳ್ಳಲಾಗಿದೆ. ಯಜ್ಞಗಳನ್ನು ಮಾಡಬೇಕಾದರೆ ಧನದ ಅಗತ್ಯವಿರುವಂತೆಯೇ ಯಜ್ಞಕ್ಕೆ ಸಂಬಂಧಿಸಿದ ಜ್ಞಾನಶಕ್ತಿಯೂ ಅತ್ಯಾವಶ್ಯಕ. ಮಾತ್ರವಲ್ಲ, ಯಜ್ಞದ ರಕ್ಷಣೆ ಹಾಗೂ ವಿಘ್ನರಹಿತವಾಗಿ ಅದನ್ನು ನೆರವೇರಿಸಲು ಸಿದ್ಧಿ ಸಾಧನೆಯೂ ಇರಬೇಕು. ಈ ಭಾವಗಳೇ ಕ್ರಮವಾಗಿ ಲಕ್ಷ್ಮಿ, ಸರಸ್ವತಿ, ಕಾರ್ತಿಕೇಯ ಹಾಗೂ ಗಣಪತಿಯ ರೂಪಗಳನ್ನು ತಳೆದವು. ಸಿಂಹವು ಹಿಂಸೆ ಮಾತ್ಸರ್ಯಗಳ ಪ್ರತೀಕವಾದರೆ ಅಸುರನು ಪಾಪದ ಪ್ರತೀಕ. ಇವುಗಳನ್ನು ಜಯಸಿದಾಗಲೇ ಯಜ್ಞವು ಸಂಪನ್ನವಾಗುವುದು. ಆದ್ದರಿಂದಲೇ ದೇವಿಯ ಸ್ಥಾನವು ಈ ಎಲ್ಲ ವಿಗ್ರಹಗಳಿಗಿಂತ ಎತ್ತರದಲ್ಲಿದೆ. ಆದರೆ ಭಕ್ತನ ದೃಷ್ಟಿ ಬೇರೆ. ಅವನ ದೃಷ್ಟಿಯಲ್ಲಿ ದೇವಿ ಜಡವಸ್ತುವಲ್ಲ, ಕಾಲ್ಪನಿಕವೂ ಅಲ್ಲ. ಸಾಮಾನ್ಯ ದೃಷ್ಟಿಯಲ್ಲಿ ಜಡವೆಂದು ತೋರುವ ವಿಶ್ವದ ಮೂಲಭೂತ ಶಕ್ತಿಯು ಚೈತನ್ಯಪೂರ್ಣವಾದ ನಿತ್ಯಚೈತನ್ಯದ ರೂಪವನ್ನು ತಾಳುತ್ತದೆ. ಶಕ್ತಿಯು ಎಂದಿಗೂ ಸ್ವರೂಪಚೈತನ್ಯದಿಂದ ಬೇರಲ್ಲ. ಆದ್ದರಿಂದಲೇ ಬ್ರಹ್ಮಮಯಿ ಜಗದಂಬೆಯು ನಿರ್ಗುಣ ಸ್ವರೂಪಳಾದರೂ ಭಕ್ತರಿಗೆ ಆಕೆಯು ಸಗುಣ-ಸಾಕಾರಳು. ನಿರ್ವಿಕಾರಳಾದರೂ ಆಕೆ ಭಕ್ತವತ್ಸಲೆ. ಭಕ್ತನ ಆಂತರಿಕ ಪೂಜೆಯನ್ನು ಆಕೆ ಸ್ವೀಕರಿಸುತ್ತಾಳೆ. ಯಾವ ಭಕ್ತನ ಹೃದಯದಲ್ಲಿ ಜಗಜ್ಜನನಿಯು ಪ್ರಕಾಶಿಸುವಳೋ ಅಂತವನಿಗೆ ಐಶ್ವರ್ಯ, ಜ್ಞಾನ, ಶಕ್ತಿ, ಸಿದ್ಧಿ ಮುಂತಾದ ಯಾವುದರ ಅಭಾವವೂ ಗೋಚರಿಸದು. ಮೃತ್ತಿಕೆಯ ಪ್ರತಿಮೆಯನ್ನು ಅವಲಂಬಿಸಿ ಭಕ್ತನು ಚಿನ್ಮಯಿಯಾದ ಜಗನ್ಮಾತೆಯನ್ನು ಪೂಜಿಸಿ ಧನ್ಯನಾಗುತ್ತಾನೆ.

ಸ್ನಾನ, ಉಪಾಸನೆ, ಬಲಿ ಹಾಗೂ ಹೋಮ — ಇವು ದುರ್ಗಾಪೂಜೆಯ ಮುಖ್ಯ ಅಂಗಗಳು. ಆದರೆ ಅದಕ್ಕೂ ಮೊದಲು ದೇವಿಯ 'ಬೋಧನ' (ವಿಧ್ಯುಕ್ತವಾಗಿ ದೇವಿಯನ್ನು ಜಾಗೃತಗೊಳಿಸುವುದು) ಮಾಡಬೇಕು. ಶಿವನಿಗೆ ಪ್ರಿಯವಾದ ಬಿಲ್ವವೃಕ್ಷವೇ ಶಿವಪ್ರಿಯೆ ಶಿವಾನಿಯ ನಿವಾಸ. ಆದ್ದರಿಂದಲೇ ಪೂಜಕ ಭಕ್ತನು ತನ್ನ ಜನನಿಯನ್ನು ವ್ಯಾಕುಲತೆಯಿಂದ ಆಹ್ವಾನಿಸುತ್ತಾನೆ. ಸಾಧಕನ ದೃಷ್ಟಿಯಲ್ಲಿ ಮೇರುದಂಡದಲ್ಲಿ ಸ್ಥಿತವಾದ ಸುಷುಮ್ನವೇ ಬಿಲ್ವವೃಕ್ಷ. 'ತನ್ಮಿಮ್ನದೇಶೇ ಅನಂತಶಕ್ತಿಮಯೀ ಮಾತಾ ಪ್ರಸುಪ್ತಾ.' ಏಕಾಗ್ರಚಿತ್ತದಿಂದ ಮಾಡಿದ ಧ್ಯಾನದಿಂದ ಆಕೆಯು ಜಾಗೃತಳಾಗುವಳು.

ನಾನಾ ನದ-ನದಿ ಕೆರೆಗಳ ಹಾಗೂ ಸಮುದ್ರ ಜಲ ಹಾಗೂ ನಾನಾ ಸ್ಥಳಗಳ ವಿವಿಧ ದ್ರವ್ಯಗಳಿಂದ ದೇವಿಯ ಸ್ನಾನದ ವ್ಯವಸ್ಥೆಯಾಗುತ್ತದೆ. ದೇವಿಯು ನಿತ್ಯಶುದ್ಧಳು. ಸಕಲ ಸ್ಥಾನ ಹಾಗೂ ಸಕಲ ಜಲವೂ ಆಕೆಗೆ ಶುದ್ಧವಾದುವೇ. ಆದರೆ ಭಕ್ತನು ಸಕಲ ದ್ರವ್ಯಗಳಿಂದ ಆಕೆಗೆ ಸ್ನಾನ ಮಾಡಿಸಿ ತೃಪ್ತನಾಗುತ್ತಾನೆ; ತನ್ನೊಳಗಿನ ಅಶುದ್ಧ ಭಾವದಿಂದ ಮುಕ್ತನಾಗುತ್ತಾನೆ.

ದುರ್ಗಾಪೂಜೆಯು ಬೇರೆ ಬೇರೆ ದಿನಗಳಲ್ಲಿ ಪ್ರಾರಂಭವಾದರೂ ಆಶ್ವಯುಜ ಶುಕ್ಲ ಸಪ್ತಮಿ, ಅಷ್ಟಮಿ ಹಾಗೂ ನವಮಿಗಳಂದು ದೇವಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಮೃತ್ತಿಕೆಯಿಂದ ತಯಾರಿಸಿದ ಪ್ರತಿಮೆಯನ್ನು ನದಿ ಇಲ್ಲವೆ ಇತರ ಜಲಾಶಯಗಳಿಗೆ ಒಯ್ದು, ವಿಧ್ಯುಕ್ತ ಸ್ನಾನವನ್ನು ಮಾಡಿಸುವುದು

ಸುಲಭವಲ್ಲ. ಆದ್ದರಿಂದ ನವಪತ್ರಿಕಾರೂಪಿಣಿ ಜಗನ್ಮಾತೆಗೆ ಪೂಜಾಸ್ಥಳದಲ್ಲೆ ದರ್ಪಣದಲ್ಲಿ ಮಹಾಸ್ನಾನವನ್ನು ನೆರವೇರಿಸುತ್ತಾರೆ. ಭಕ್ತರು ತಮಗೆ ಪ್ರಿಯವಾದ ಭಕ್ಷ್ಯ-ಭೋಜನ, ವಸ್ತ್ರಾಲಂಕಾರಗಳನ್ನು ಜಗನ್ಮಾತೆಯ ಚರಣದಲ್ಲಿ ಒಪ್ಪಿಸುತ್ತಾರೆ. ಮಹಾಷ್ಟಮಿಯ ದಿನದಂದು ಶಕ್ತಿಸಂಪನ್ನಳಾದ ದೇವಿಗೆ ನಾನಾ ಉಪಚಾರಗಳಿಂದ ಪೂಜೆಗೈಯುತ್ತಾರೆ. ಅಷ್ಟಮಿ -ನವಮಿಗಳ ಸಂಧಿಕಾಲದಲ್ಲಿ ಘೋರ ಪ್ರಳಯಂಕರಿ ಚಾಮುಂಡೇಶ್ವರಿಯ ಉಪಾಸನೆ ನಡೆಯುತ್ತದೆ. ಏಕೆಂದರೆ ಜಗನ್ಮಾತೆ ಸೃಷ್ಟಿ ಸ್ಥಿತಿಕಾರಿಣಿ ಮಾತ್ರವಲ್ಲದೆ ಆಕೆಯು ಪ್ರಳಯಕರ್ತ್ರಿಯೂ ಆಗಿರುವಳು. 'ಸೌಮ್ಯಾ ಸೌಮ್ಯತರಾ' ಮಾತ್ರವಲ್ಲ; ಆಕೆ 'ಘೋರ ರಾವಾ ಮಹಾರೌದ್ರೀ' ಕೂಡ. ಹೀಗೆ ಸಮಸ್ತ ದ್ರವ್ಯಗಳಿಂದ ಅನಂತ ಜಗನ್ಮಾತೆಯ ಪೂಜೆಯನ್ನು ಮಾಡಿದರೂ ಪೂಜೆಯು ಪೂರ್ಣವಲ್ಲ. ದೇವಿ ಜಗನ್ಮಾತೆ ರುಧಿರಪ್ರಿಯೆಯಾದ್ದರಿಂದ ಆಕೆಗೆ ಬಲಿಯನ್ನೂ ಕೊಡಬೇಕು. ನಮ್ಮ ಪರಿವಾರದ ಆಂತರ್ಯದಿಂದ ಆಕೆಗೆ ಪರಿಪೂರ್ಣ ಸಮರ್ಪಣೆಯಷ್ಟೇ ಅಲ್ಲದೆ ಭಕ್ತನು ತನ್ನನ್ನು ತಾನೇ ಸಂಪೂರ್ಣ ಆಹುತಿ ನೀಡಬೇಕು. ಆಗ ಮಾತ್ರವೇ ಬಲಿದಾನ, ಹೋಮಗಳು ಪೂರ್ಣವಾಗಿ ದೇವಿಯು ಪ್ರಸನ್ನಳಾಗುವಳು. ಅನಂತರ ವಿಜಯಾ-ವಿಜಯೋಲ್ಲಾಸ. ಯಾವ ಮಹಾಲಯದ (ಮಹತಾಂ ಬುದ್ಧ್ಯಾದೀನಾಂ ಲಯೋ ಯಸ್ಯಾಂ) ಪ್ರಾರಂಭವು ಪಿತೃಪಕ್ಷದದಲ್ಲಿ ಪಿತೃತರ್ಪಣ ನೀಡಿ ಸಾಧಕನ ಮನಸ್ಸು ಶುದ್ಧವಾಯಿತೋ, ಪಿತೃಲೋಕದಲ್ಲಿ ಯಾವುದರ ಆಂಶಿಕ ಪ್ರಕಾಶವಾಯಿತೋ, ಇಂದು ಕೊನೆಯಲ್ಲಿ ತನ್ನ ಸರ್ವಸ್ವವನ್ನೂ ಬಲಿಕೊಟ್ಟು ಸರ್ವಾಧಾರರೂಪಿಣಿಯಾದ ಮಹಾಲಯವನ್ನು ಆಂತರ್ಯದಲ್ಲಿ ಸಂಪೂರ್ಣ ರೂಪದಲ್ಲಿ ಪಡೆದ ವಿಜಯೋಲ್ಲಾಸ. ಪಶುವನ್ನು ಬಲಿಗೊಡುವ ಬಲಿದಾನ ಹಾಗೂ ಸಿದ್ಧಿಯು ಪರಮಸಿದ್ಧಿಯ ಪ್ರತೀಕ ಮಾತ್ರ.

೧೧.೦೪.೧೯೭೨ರಂದು ಭವ ಮಹಾರಾಜರು ನನಗೆ ಬರೆದಿದ್ದರು : 'ನಾನಲ್ಲ-ಜಗನ್ಮಾತೆ' ಎಂದು ನೀನು ಹಿಂದಿನ ಪತ್ರದಲ್ಲಿ ಬರೆದಿದ್ದೆ. ಎಂಥ ಸೊಗಸಾದ ಮಾತು! ಈ ಸಣ್ಣ 'ಅಹಂ' ಅನ್ನು ನಾವು ಎಷ್ಟು ಪಕ್ಕಕ್ಕೆ ಸರಿಸುತ್ತೇವೆಯೋ ಅಷ್ಟು ಆಕೆಯ 'ಅಹಂ', ಅರ್ಥಾತ್ ಜಗನ್ಮಾತೆಯ ಕೆಲಸ ನಡೆಯುತ್ತದೆ. ಆಕೆಯೆ ಕರ್ತ್ರೀ. 'ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ' *(ಭಗವದ್ಗೀತೆ ೧೮.೬೧).* ಆದರೆ 'ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ' *(ಗೀತಾ, ೩.೨೭).* ಈ 'ಅಪಕ್ವ' ಅಹಂಕಾರವನ್ನು ದಮನ ಮಾಡಿ 'ಪಕ್ವ' ಅಹಂ – ಭಗವಂತನ ದಾಸ ನಾನು, 'ನಾನು ಯಂತ್ರ ಮಾತ್ರವೇ' ಎಂಬ ಭಾವವನ್ನು ತಾಳಿದರೆ ಅದೆಷ್ಟು ಸೊಗಸಾಗಿರುತ್ತದೆ! 'ನಾನು ಭಗವಂತನ ದಾಸ' ಎಂಬ ಅಹಂಕಾರಕ್ಕೇ 'ಪಕ್ವ ಅಹಂ' ಎನ್ನುವುದು. ಈ 'ನಾನು' ದುರ್ಬಲ, ಅಸಹಾಯಕನಲ್ಲ. ಅದು ಈಶ್ವರನ ಶಕ್ತಿಯಿಂದ ಶಕ್ತಿಯುತವಾಗಿರುವುದು, ಅಮಿತ ಶಕ್ತಿಸಂಪನ್ನರಾದ 'ಶ್ರೀರಾಮಕೃಷ್ಣ ಪುಂಥಿ'ಯ ಕರ್ತೃಗಳು ಇದನ್ನು ಸುಂದರವಾಗಿ ವರ್ಣಿಸಿದ್ದಾರೆ:

**ಮಾಗಿದ ನಾನೆಂಬುದು ಬಲು ನಮ್ರವಾಗಿರುವುದು।**
**ಮಾಗದ ನಾನೆಂಬುದೆ ಮದ ಅಹಂಕಾರವು ॥**

**ದಾಸ 'ನಾನು' ಬಹು ರಮಣೀಯವಾಗಿಹುದು ।**
**ನಾನೆಂಬ ಭಾವವು ಆಗ ಸತ್ತಂತೆ ಇಹುದು ॥**

**ಮೃತವಾದರೂ ಶಕ್ತಿ ಅಪಾರ ಅದರದು ।**
**ರೋಮ-ರೋಮಗಳಲ್ಲಿ ಅಚಲವಾಗಿಹುದು ॥**

**ಕಡಲು ಆರಿದರೆ ಬೊಗಸೆಯಲ್ಲಿ ಹಿಡಿಸುವುದು ।**
**ಕ್ಷಣದಲಿ ಹಾರಿ ಅದನು ಪಾರಾಗಬಹುದು ॥**

೧೯೫೦ರಿಂದ ರಾಮಕೃಷ್ಣ ಸಂಘದ ಅನೇಕ ಸಂನ್ಯಾಸಿಗಳ ಸಂಪರ್ಕಕ್ಕೆ ಬರುವ ಸೌಭಾಗ್ಯ ನನಗೆ ದೊರೆತಿತ್ತು. ಜೀವನವನ್ನು ರೂಪಿಸಿಕೊಳ್ಳಲು ಬೇಕಾದ ಮಾರ್ಗದರ್ಶನವನ್ನು ಗ್ರಂಥಗಳಿಂದ ಅಥವಾ ಶಾಸ್ತ್ರಗಳಿಂದ ಪಡೆದುದಕ್ಕೂ ಹೆಚ್ಚಾಗಿ ಈ ಸಂನ್ಯಾಸಿಗಳಿಂದ ಪಡೆದಿದ್ದೇನೆ. ಒಂದು ದಿನ ವೇದಾಂತದ ತರಗತಿಯಲ್ಲಿ ಬ್ರಹ್ಮಚಾರಿಯೊಬ್ಬ 'ಅನುಭೂತಿ'ಯ ವಿಷಯವಾಗಿ ಸವಾಲು ಹಾಕಿದ್ದಾಗ ಭವ ಮಹಾರಾಜರು ದೃಢವಾಗಿ ಹೇಳಿದ್ದರು ''ಕಳೆದ ನಲ್ವತ್ತು ವರ್ಷ ನಾನು ಬರಿಯ ಹುಲ್ಲು ಕತ್ತರಿಸಿ ಕೊಂಡಿದ್ದೆ ಎಂದುಕೊಂಡೆಯಾ?''

*(ಮುಕ್ತಾಯ)*

## ಸ್ತ್ರೀಯರೂ ಬ್ರಹ್ಮಜ್ಞಾನಕ್ಕೆ ಅರ್ಹರು

ಪರಬ್ರಹ್ಮನ ಪರಾಕಾಷ್ಠೆಯಲ್ಲಿ ಲಿಂಗಭೇದವಿಲ್ಲ. ಕೇವಲ ಈ ಕಾರ್ಯಕಾರಣ ಸಂಬಂಧದ ಪ್ರಪಂಚದಲ್ಲಿ ನಾವದನ್ನು ನೋಡುವೆವು. ಮನಸ್ಸು ಅಂತರ್ಮುಖವಾದಷ್ಟೂ ಈ ಭೇದಭಾವನೆ ನಾಶವಾಗುವುದು. ಕಟ್ಟಕಡೆಗೆ ಯಾವಾಗ ಮನಸ್ಸು ಲಿಂಗಾತೀತವಾದ, ಅಭಿನ್ನವಾದ ಬ್ರಹ್ಮನಲ್ಲಿ ತನ್ಮಯವಾಗುವುದೋ ಆಗ ಈತ ಗಂಡಸು ಆಕೆ ಹೆಂಗಸು ಎಂಬ ಭಾವನೆಗಳಿಗೆ ಸ್ಥಳವೇ ಇರುವುದಿಲ್ಲ. ಶ್ರೀರಾಮಕೃಷ್ಣರ ಜೀವನದಲ್ಲಿ ಇದನ್ನು ಕಣ್ಣಾರೆ ಕಂಡಿರುವೆವು. ಪುರುಷನಾದವನು ಬ್ರಹ್ಮಜ್ಞಾನ ಪಡೆಯಬಲ್ಲವನಾದರೆ ಸ್ತ್ರೀಯು ಏಕೆ ಆ ಜ್ಞಾನ ಪಡೆಯಲಾಗದು ? ಆದ್ದರಿಂದಲೇ ಸ್ತ್ರೀಯರಲ್ಲಿ ಓರ್ವಳು ಬ್ರಹ್ಮಜ್ಞಾನಿಯಾದರೂ ಆಕೆಯ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಂದಿ ಸ್ತ್ರೀಯರು ಸ್ಫೂರ್ತಿ ಹೊಂದಿ ಸತ್ಯವನ್ನರಿತು ಇಡೀ ದೇಶಕ್ಕೆ ಕಲ್ಯಾಣವಾಗಿ ಸಮಾಜವೂ ಭದ್ರವಾಗುವುದು.

**— ಸ್ವಾಮಿ ವಿವೇಕಾನಂದ**

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು. ೨೭೭)*